

# ನಿನ್ನೆಯ ಸಾಂಬಾರಿಗೆ ಮೊನ್ನೆಯ ಕೊತ್ತಂಬರಿ ಸೊಪ್ಪು!

**ಅತ್ತೆ ಸೊಸೆಯರ ಟಿಪಿಕಲ್ ಪಾತ್ರಗಳನ್ನು ಇನ್ನಷ್ಟು ಟಿಪಿಕಲ್‌ಗೊಳಿಸಲು ಯತ್ನಿಸುವ ಈ ಕಿರುಚಿತ್ರ ಆ ಕಥೆಯನ್ನು ಹೇಳುವುದಕ್ಕಾಗಿ ಹಾರರ್ ಜಾನರ್‌ನ ನೆರವನ್ನೂ ಪಡೆದಿದೆ.**

ಹಾರರ್ ಮತ್ತು ಫ್ಯಾಮಿಲಿ ಡ್ರಾಮಾ ಎರಡನ್ನೂ ಹೆಣೆದು ಸಿನಿಮಾ ಕಟ್ಟುವ ಪ್ರಯತ್ನ 'ದಿ ಬೆಲ್' ಕಿರುಚಿತ್ರದಲ್ಲಿದೆ. ಹೀಗೆ ಎರಡು ಪ್ರಕಾರಗಳನ್ನು ಜೋಡಿಸುವುದರ ಜೊತೆಗೆ ಒಂದು ಸಾಮಾಜಿಕ ಸಂದೇಶವನ್ನು ಹೇಳಬೇಕು ಎಂಬ 'ಭಾರ'ದ ಜವಾಬ್ದಾರಿಯನ್ನೂ ನಿರ್ದೇಶಕ ರಘುಕುಮಾರ್ ತಮ್ಮ ಮೇಲೆ ಎಳೆದುಕೊಂಡಿದ್ದಾರೆ. ಹಾಗಾಗಿ ಅರ್ಧಗಂಟೆಯ ಈ ಕಿರುಚಿತ್ರದಲ್ಲಿ ಎರಡು ಕಥೆ ಮತ್ತೊಂದು ಸಾಮಾಜಿಕ ಸಂದೇಶದ ಕೊಂಬೊ ಪ್ಯಾಕ್ ಸಿಗುತ್ತದೆ. ಆದರೆ ಆ ಪ್ಯಾಕ್‌ನ ರುಚಿಯೆಷ್ಟು? ರೆಸಿಪಿಯೇನು? ಆರೋಗ್ಯದ ದೃಷ್ಟಿಯಿಂದ ಅದರ ಸೇವನೆ ಎಷ್ಟು ಹಿತಕಾರಿ ಎಂಬೆಲ್ಲ ಪ್ರಶ್ನೆಗಳನ್ನು ಕೇಳಿಕೊಂಡರೆ ನಾಲಿಗೆಗೆ ತುಸು ಒಗರೊಗರು ಆಗುತ್ತದೆ.

ಹೊಸ ಜೋಡಿಯೊಂದು ಹಳೆ ಮನೆಯೊಂದನ್ನು ಕೊಂಡುಕೊಳ್ಳುತ್ತಾರೆ. ಆದರೆ ಮನೆಗೆ ಬಂದ ದಿನ ರಾತ್ರಿಯಿಂದಲೇ ಹುಡುಗಿಗೆ ದೆವ್ವದ ಕಾಟ ಶುರುವಾಗುತ್ತದೆ. ಗಂಡನ ನೆತ್ತಿಯನ್ನು ನೇವರಿಸುತ್ತಲೇ ಹೆಂಡತಿಯ ಕತ್ತು ಹಿಚುಕುವ ಡಬಲ್‌ಗೇಮ್ ದೆವ್ವ ಅದು. ಮೊದ ಮೊದಲಿಗೆ ಇವೆಲ್ಲವೂ ಹೆಂಡತಿಯ ಭ್ರಮೆ ಎಂದುಕೊಂಡರೂ ಕೊನೆಗೆ ಹೆಂಡತಿಯ ಮಾತಿನ ಮೇಲೆ ಗಂಡನಿಗೆ ನಂಬಿಕೆ ಬರುತ್ತದೆ. ಆಗ ಒಬ್ಬಳು ಮಾಂತ್ರಿಕಳನ್ನು ಮನೆಗೆ ಕರೆತರುತ್ತಾರೆ. ಮನೆ ನೋಡಿದ ಮಾಂತ್ರಿಕಳ ದೊಡ್ಡ ಕಣ್ಣುಗಳಲ್ಲಿ ಆ ಮನೆಯಲ್ಲಿ ಹಿಂದೆ ವಾಸಿಸುತ್ತಿದ್ದ ಮತ್ತೊಂದು ಸಂಸಾರದ ಫ್ಲ್ಯಾಶ್‌ಬ್ಯಾಕ್ ಬಿಚ್ಚಿಕೊಳ್ಳುತ್ತದೆ. ಅಲ್ಲಿಂದ ಮತ್ತೊಂದು ಕಥೆ ಶುರು.

ಹೆಸರು: ದ ಬೆಲ್ (ಕನ್ನಡ)
ನಿರ್ದೇಶನ: ರಘುಕುಮಾರ್
ನಿರ್ಮಾಣ: ತಿಮ್ಮರಾಜು ಎಚ್‌ಎಸ್, ಲಕ್ಷ್ಮೀಕಾಂತ್
ಛಾಯಾಗ್ರಹಣ: ರಿಷಿಕೇಶ್
ಸಂಕಲನ: ಉಮೇಶ್ ಆರ್‌ಬಿ.
ಸಂಗೀತ: ಪ್ರದ್ಯೋತ್ತಾನ್
ತಾರಾಗಣ: ಆಶಾ ರಾಣಿ, ಅಶ್ವಿನ್ ಹಾಸನ್, ಭವಾನಿ ಪ್ರಕಾಶ್, ರಮ್ಯಾ ಕೃಷ್ಣ

■ **ಗೌರಿ**

ಅತ್ತೆ–ಸೊಸೆ ಇಬ್ಬರೂ ಶತ್ರುಗಳಂತೆ ಇರುತ್ತಾರೆ. ಪರಸ್ಪರ ವೈರಿಗಳಂತೆ ನೋಡಿಕೊಳ್ಳುತ್ತಾರೆ. ಅವರು ಹೊಂದಿಕೊಂಡು ಇದ್ದರೆ ಸಂಸಾರ ಸುಖಮಯವಾಗಿರುತ್ತದೆ ಎಂಬ ಸವಕಲು ಗ್ರಹಿಕೆಯನ್ನೇ ಮತ್ತೆ ಉಜ್ಜಲು ಹೊರಟಿರುವುದರಿಂದ ಕಿರುಚಿತ್ರ ನಿರೀಕ್ಷಿತ ಜಾಡಿನಲ್ಲಿಯೇ ಸಾಗುತ್ತದೆ. ಪರಮ ಕ್ರೂರಿ ಸೊಸೆ, ಅಸಹಾಯಕ ರೋಗಿಷ್ಠ ಅತ್ತೆ, ಮುಗ್ಧತೆಯೇ ಮೈವೆತ್ತಂತಿರುವ ಮಗ. ಈ ಮೂರೂ ಪಾತ್ರಗಳೂ ಕ್ಲಿಷೆ ಅನ್ನಿಸುವಷ್ಟು ಬಂದು ಹೋಗಿವೆ. ಅದನ್ನೇ ಇನ್ನಷ್ಟು ಕ್ಲಿಷೆಗೊಳಿಸುವ ಹಾಗೆ ಇಲ್ಲಿನ ಕಥೆ ಸಾಗುತ್ತದೆಯೇ ಹೊರತು ಅದರಾಚೆಗೆ ಸೂಕ್ಷ್ಮವಾದ ಏನನ್ನೂ ಹೊಳೆಸುವುದಿಲ್ಲ.

ಕ್ರೌರ್ಯವನ್ನು ತಣ್ಣಗೆಯೂ ಹೇಳಬಹುದು ಎಂಬುದರಲ್ಲಿ ನಿರ್ದೇಶಕರಿಗೇ ನಂಬಿಕೆಯಿದ್ದಂತಿಲ್ಲ. ಮುಟ್ಟಿದರೆ ಮುರಿದುಬೀಳುವ ಹಾಗೆ ಕಾಣಿಸುವಷ್ಟು ಕೃಶ ಶರೀರದ ಅತ್ತೆಗೆ ಸೊಸೆ ಮಾಸ್ ಸಿನಿಮಾ ಹೀರೊನಷ್ಟೇ ವೀರಾವೇಶದಿಂದ ಹೊಡೆದು, ಬಡಿದು, ಒದೆಯುವ ದೃಶ್ಯಗಳೆಲ್ಲವೂ ಕಥೆಯೊಳಗಿನ ಅಗತ್ಯಕ್ಕಿಂತ, ನಿರ್ದೇಶಕರಿಗೆ ಕೃತಕ ಕ್ರೌರ್ಯದ ಮೇಲೆ ಇರುವ ನಂಬಿಕೆಯನ್ನು ತೋರಿಸುತ್ತದಷ್ಟೆ. ಅಷ್ಟೆಲ್ಲ ಹಿಂಸಿಸಿಯೂ ಮಗನಿಗೆ ಏನೂ ಗೊತ್ತಾಗದಿರುವುದು ಇನ್ನೊಂದು ನಿಗೂಢ ಸಂಗತಿಯೇ ಸರಿ. ಈ ಅಪಸವ್ಯಗಳಿಂದ ಹಾರರ್ ಭಾಗವು ಕಾಮಿಡಿಯಂತೆಯೂ, ಫ್ಯಾಮಿಲಿ ಡ್ರಾಮಾ ಭಾಗವು ಹಾರರ್ ಹಾಗೆಯೂ ಕಾಣಿಸುತ್ತವೆ. ಸಿನಿಮಾದ ಕೊನೆಯಲ್ಲಿ ಸಂದೇಶರೂಪದಲ್ಲಿ ಕೇಳಿಬರುವ ಸಂಸಾರ, ಅತ್ತೆ–ಸೊಸೆಯಂದಿರ ಸಂಬಂಧದ ಕುರಿತಾದ ಎಳಸು ವ್ಯಾಖ್ಯಾನಗಳನ್ನು ಬೇಕಾದರೆ ಕಾಮಿಡಿ ಜಾನರ್‌ಗೆ ಸೇರಿಸಬಹುದು.

ಇವುಗಳ ಹೊರತಾಗಿ ಅಚ್ಚುಕಟ್ಟಾದ ಛಾಯಾಗ್ರಹಣ, ನಟನೆ, ಹಿನ್ನೆಲೆ ಸಂಗೀತಗಳೆಲ್ಲ ಸಿನಿಮಾವನ್ನು ಸಹನೀಯಗೊಳಿಸಲು ವಿಫಲಪ್ರಯತ್ನ ನಡೆಸಿರುವುದೂ ಹೇಳಲೇಬೇಕು. ಕಿರುಚಿತ್ರ ಮಾಧ್ಯಮದ ಗಡಿರೇಖೆಗಳು ಗೊತ್ತಿಲ್ಲದೆ, ಈಗಾಗಲೇ ಬಳಸಿ ಸವೆದಿರುವ ಕಥೆ, ಪಾತ್ರಗಳನ್ನೇ ಇನ್ನಷ್ಟು ಉಜ್ಜಿ ಶಬ್ದ ಹೊರಡಿಸುವ ಕೆಲಸವನ್ನಷ್ಟೇ ಈ ಕಿರುಚಿತ್ರ ಮಾಡುತ್ತದೆ.

ಕಿರುಚಿತ್ರ ವೀಕ್ಷಣೆಗೆ
https://bit.ly/3NZ7bFL
ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.